

# ಆಕರ್ಷಕ ಹಾಲ್ ಗ್ರಿಮೂರ್ ಚರ್ಚ್

ಉಡಾವಣೆಗೆ ಸಿದ್ಧವಾಗಿರುವ ರಾಕೆಟ್‌ನಂತೆ ಕಾಣುವ ಹಾಲ್ ಗ್ರಿಮೂರ್ ಚರ್ಚ್ ಐಸ್‌ಲ್ಯಾಂಡ್ ದೇಶದ ರೇಕ್‌ಜಾವಿಕ್ ನಗರದ ಮಧ್ಯಭಾಗದಲ್ಲಿರುವ ಸ್ಕೋಲಾವೋಡ್ ಹೋಲ್ಟ್ ಬೆಟ್ಟದ ತುದಿಯಲ್ಲಿದೆ. ಐಸ್‌ಲ್ಯಾಂಡ್‌ನ ಪ್ರಸಿದ್ಧ ಕವಿ ಹಾಗೂ ರಾಷ್ಟ್ರದ ಆಧ್ಯಾತ್ಮಿಕ ಬೆಳವಣಿಗೆಯ ಮೇಲೆ ಪ್ರಭಾವ ಬೀರಿದ ಪಾದ್ರಿ ಹಾಲ್ ಗ್ರಿಮೂರ್ ಪೆತುರ್ಸನ್ ಅವರ ಹೆಸರನ್ನೇ ಈ ಈ ಚರ್ಚ್‌ಗೆ ಇಡಲಾಗಿದೆ. ಜ್ವಾಲಾಮುಖಿ ತಣ್ಣಗಾದ ನಂತರ ಏರ್ಪಡುವ ಬಸಾಲ್ಟ್‌ನ ಗಣಿತದ ಸಮ್ಮಿತಿಯನ್ನು ಹೋಲುವ ವಿಶಿಷ್ಟ ವಿನ್ಯಾಸವಿರುವ ಈ ಚರ್ಚಿನ ವಿನ್ಯಾಸಕಾರ ಗುಜೊನ್ ಸ್ಯಾಮುಯೆಲ್ಸನ್. 1945ರಲ್ಲಿ ಇದರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಯಿತಾದರೂ 41 ವರ್ಷಗಳ ಬಳಿಕ 1986 ನಿರ್ಮಾಣ ಪೂರ್ಣಗೊಂಡಿತು.

ಹಾಲ್ ಗ್ರಿಮೂರ್ ಚರ್ಚ್‌ನ ಒಳಾಂಗಣವು, ಹೊರಾಂಗಣಕ್ಕಿಂತಲೂ ಭಿನ್ನವಾಗಿದ್ದು ಸಾಂಪ್ರದಾಯಿಕ ಗೋಥಿಕ್ ಶೈಲಿಯ ಕಮಾನುಗಳನ್ನು ಹಾಗೂ ಕಿರಿದಾದ ಕಿಟಕಿಗಳನ್ನು ಹೊಂದಿದೆ. 250 ಅಡಿ ಎತ್ತರವಿರುವ ಈ ಚರ್ಚ್ ಹನ್ನೆರಡು ಮೈಲಿ ದೂರದಿಂದಲೇ ಕಾಣುತ್ತದೆ. ಈ ಚರ್ಚ್ ವೀಕ್ಷಣಾ ಗೋಪುರದಿಂದ ನಗರದ ಸೌಂದರ್ಯವನ್ನು ಸವಿಯಬಹುದು. ಗೋಪುರವನ್ನು ತಲುಪಲು ಎಲಿವೇಟರ್ ಅಳವಡಿಸಲಾಗಿದೆ. ಇಲ್ಲಿರುವ ಪ್ರಮುಖ ಆಕರ್ಷಣೆಯೆಂದರೆ 45 ಅಡಿ ಎತ್ತರ ಹಾಗೂ 25 ಟನ್ ಭಾರವುಳ್ಳ ಆರ್ಗನ್. ಯಂತ್ರಗಳ ಸಹಾಯದಿಂದ ನುಡಿಸಲ್ಪಡುವ ಈ ಆರ್ಗನ್ ಅನ್ನು ವಾರದಲ್ಲಿ ಮೂರು ಸಲ, ಮಧ್ಯಾಹ್ನ ಹಾಗೂ ರಾತ್ರಿ ಊಟದ ಸಮಯದಲ್ಲಿ ಹಾಗೂ ಸಂಜೆ ಸಂಗೀತ ಮೇಳದ ಸಮಯದಲ್ಲಿ ನುಡಿಸಲಾಗುತ್ತದೆ. 1992ರಲ್ಲಿ ಸ್ಥಾಪಿಸಲಾದ ಅತ್ಯಾಕರ್ಷಕವಾದ ಈ ಆರ್ಗನ್ ಅನ್ನು, ಜರ್ಮನ್ ಆರ್ಗನ್ ನಿರ್ಮಾಣದಲ್ಲಿ ಪ್ರಖ್ಯಾತಿ ಪಡೆದಿರುವ ಜೊಹಾನ್ಸ್ ಕ್ಲೈಸ್ ನಿರ್ಮಿಸಿದ್ದಾರೆ.

ಒಮ್ಮೆಲೇ 1200 ಮಂದಿ ಪ್ರಾರ್ಥಿಸಲು ಅನುಕೂಲವಾಗುವಂತೆ ಆಸನಗಳನ್ನು ವ್ಯವಸ್ಥೆ ಮಾಡಲಾಗಿರುವ ಐಸ್‌ಲ್ಯಾಂಡ್ ದೇಶದ ಅತಿ ದೊಡ್ಡ ಚರ್ಚ್ ಇದಾಗಿದೆ.

**■ ಕೆ. ಶ್ರೀಧರ, ಚಿಂತಾಮಣಿ**

